ನಂಬಿಕೆ. ಇದು ತನ್ನ ಸರಿಯಾದ ಅರ್ಥವನ್ನು ಕಳೆದುಕೊಂಡು, ಈಗ ಹೇಗೆ ಕೇವಲ ಮೂಢನಂಬಿಕೆಯಾಗಿಬಿಟ್ಟಿದೆ ಎಂಬುದನ್ನು ಶ್ರೀರಾಮಕೃಷ್ಣರು ಸ್ವಾರಸ್ಯಕರವಾಗಿ ಈ ರೀತಿ ಹೇಳುತ್ತಿದ್ದರು: "ಗಂಗೆಯಲ್ಲಿ ಮೀಯುವಾಗ ಮನುಷ್ಯರ ಪಾಪಗಳೆಲ್ಲಾ ದಡದ ಮೇಲಿರುವ ಮರಗಳ ಮೇಲೆ ಕುಳಿತಿರುತ್ತವೆ. ಅವರು ಸ್ನಾನ ಮುಗಿಸಿ ಗಂಗೆಯಿಂದ ಹೋದಕೂಡಲೇ ಅವೆಲ್ಲ ಹಾರಿ ಜಿಗಿದು, ಅವರ ಹೆಗಲ ಮೇಲೆ ಯಥಾಪ್ರಕಾರ ಕುಳಿತುಕೊಂಡು ಬಿಡುತ್ತವೆ."

ಕಾಮಿನಿ–ಕಾಂಚನಗಳ ಬಗೆಗಿನ ದುರಾಸೆಯೇ ಮನುಷ್ಯ ಮುಕ್ತನಾಗುವುದಕ್ಕೆ ಇರುವ ಬಹುದೊಡ್ಡ ಅಡ್ಡಿ. ಇದು ಸಾಧಕನಾಗಬಯಸುವವನಿಗೆ ಪರಮಹಂಸರು ಹೇಳುವ ಕಿವಿಮಾತು. ಎಷ್ಟೋ ವೇಳೆ ಕಾಮಿನಿ–ಕಾಂಚನಗಳ ಪ್ರಭಾವ ನಮಗೇ ತಿಳಿಯದಷ್ಟು ಸೂಕ್ಷ್ಮವಾಗಿರುತ್ತದೆ. ಕ್ಯಾಪ್ಟನ್ ವಿಶ್ವನಾಥ ಉಪಾಧ್ಯಾಯನೆಂಬ ದೊಡ್ಡ ವೇದಾಂತಿಭಕ್ತನೊಬ್ಬನ ಮನೆಗೆ ತಾವು ಹೋದಾಗಿನ ಅನುಭವವನ್ನು ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: " ನಾನೊಂದು ದಿನ ಕ್ಯಾಪ್ಟನ್ ಮನೆಗೆ ಹೋಗಿದ್ದೆ. ಅಲ್ಲಿಂದ ಹೊರಟು ಬಲರಾಮನ ಮನೆಗೆ ಹೋಗಬೇಕಾಗಿತ್ತು. ಆದಕಾರಣ ಕ್ಯಾಪ್ಟನ್ ಅನ್ನು, 'ದಯವಿಟ್ಟು ಗಾಡಿ ಬಾಡಿಗೆಗಾಗಿ ದುಡ್ಡು ಕೊಡು' ಎಂದು ಕೇಳಿದೆ. ಅವನು ತನ್ನ ಹೆಂಡತಿಯನ್ನು ಕೇಳಿದ. ಅವಳು ಹಿಂಜರಿದು, 'ಏನು ಸಮಾಚಾರ' ಎಂದು ಅರಿಯದವಳಂತೆ ನಟಿಸಿದಳು. ಕಡೆಗೆ ಕ್ಯಾಪ್ಟನ್, 'ಸ್ವಾಮಿ, ಬಲರಾಮನೇ ಗಾಡಿ ಬಾಡಿಗೆ ಕೊಡುತ್ತಾನೆ, ಹೋಗಿ' ಎಂದು ಹೇಳಿದ. ನೋಡಿದೆಯಾ, ಗೀತೆ, ವೇದಾಂತ, ಉಪನಿಷತ್ತು – ಎಲ್ಲವೂ ಹೆಂಗಸಿನ ಮುಂದೆ ಹೇಗೆ ಡೊಗ್ಗು ಸಲಾಮು ಹಾಕುತ್ತದೆ ಎಂಬುದನ್ನು?"

ಅಶ್ವಿನೀಕುಮಾರ ದತ್ತ ಎಂಬುವವನು ತನ್ನ ಸ್ನೇಹಿತರೊಡನೆ ಪರಮಹಂಸರನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋದನು. ಅವರು, "ನನ್ನಲ್ಲೇನಿದೆ, ನೋಡುವುದಕ್ಕೆ. ಭವತಾರಿಣಿಯ ದೇವಸ್ಥಾನವನ್ನು ನೋಡಿಕೊಂಡು ಹೋಗಿ" ಎಂದರಂತೆ. "ಇಲ್ಲ ಮಹಾಶಯರೇ, ಇವರೆಲ್ಲ ನಿಮ್ಮನ್ನು ನೋಡುವುದಕ್ಕೇ ಬಂದಿದ್ದಾರೆ" ಎಂದು ಅವನೆಂದಾಗ, ಪರಮಹಂಸರು, "ಹಾಗಿದ್ದರೆ, ನಿನ್ನ ಸ್ನೇಹಿತರೆಲ್ಲ ಬೆಣಚು ಕಲ್ಲುಗಳೇ. ಅವರಲ್ಲಿ ಬೆಂಕಿ ಇದೆ. ನೀನು ಬೆಣಚುಕಲ್ಲನ್ನು ಸಾವಿರ ವರ್ಷ ನೀರಿನಲ್ಲಿ ಇಟ್ಟಿದ್ದರೂ ಹೊರತೆಗೆದು ಕುಟ್ಟಿದೊಡನೆ ಕಿಡಿಗಳನ್ನು ಉರುಳಿಸುತ್ತದೆ. ಇವರೆಲ್ಲ ಅಂಥವರೇ ಇರಬೇಕು." ಈ ಭೇಟಿಯನ್ನು ವರ್ಣಿಸುತ್ತ, ಅಶ್ವಿನೀಕುಮಾರ ದತ್ತನು ಬರೆದಿರುವ ಪತ್ರದ ಕೊನೆಯಲ್ಲಿ ಈ ಸುಂದರ ಮಾತುಗಳನ್ನು ಕಾಣುತ್ತೇವೆ: **"ನಾನು ಆ ದಿನ ಏನನ್ನು ಕಂಡೆನೋ, ಕೇಳಿದೆನೋ ಅದು ನನ್ನ ಜೀವನವನ್ನು ಮಧುರಮಯವನ್ನಾಗಿ ಮಾಡಿದೆ. ಅವರ ಆ ಅಮೃತ ಸೂಸುವ ಲೋಕೋತ್ತರವಾದ ಮುಗುಳ್ನಗೆಯನ್ನು ನನ್ನ ಹೃದಯ ಕರಂಡಕದಲ್ಲಿ, ನೆನಪಿನ ಮಂಜೂಷೆಯಲ್ಲಿ ಅಮೂಲ್ಯ ಆಸ್ತಿಯೆಂದೇ ಬಚ್ಚಿಟ್ಟುಕೊಂಡಿದ್ದೇನೆ."**

ಅಂದಿನಿಂದ ಇಂದಿನವರೆಗೆ ಅದೆಷ್ಟು ಜನ ಹೀಗೆ ಶ್ರೀರಾಮಕೃಷ್ಣರ ಮಂದಹಾಸವನ್ನು ಬಚ್ಚಿಟ್ಟುಕೊಂಡಿದ್ದಾರೆಯೋ?

---

## ಸ್ಫೂರ್ತಿಪ್ರಭ

## ಸತ್ಸಂಗ

ಹಕೀಮ ಲುಕುಮಾನ ಮರಣಶಯ್ಯೆಯಲ್ಲಿದ್ದ. ಅವನ ಜೀವನದ ಅಂತಿಮ ಕ್ಷಣ ಸಮೀಪಿಸುತ್ತಿತ್ತು. ಲುಕುಮಾನ ಬಹುದೊಡ್ಡ ವಿದ್ವಾಂಸ ಹಾಗೂ ಸದಾಚಾರಿಯಾದ ಹಕೀಮನಾಗಿದ್ದ. ತನ್ನ ಹತ್ತಿರ ಶೋಕತಪ್ತನಾಗಿ ಕುಳಿತಿದ್ದ ತನ್ನ ಮಗನನ್ನು ಒಮ್ಮೆ ನೋಡಿದ. ಅವನನ್ನು ಪ್ರೀತಿಯಿಂದ ಮೈದಡವಿದ. "ಮಗೂ! ಇಷ್ಟು ದಿನ ಸಮಯ ಸಿಕ್ಕಾಗಲೆಲ್ಲ ನಿನಗೆ ಅನೇಕ ನೀತಿಯ ವಿಷಯಗಳನ್ನು ಹೇಳುತ್ತ ಬಂದಿದ್ದೇನೆ. ನೀನು ಅದನ್ನು ತುಂಬ ಸಮಾಧಾನಚಿತ್ತನಾಗಿ ಕೇಳಿ, ಅದರಂತೆ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನ ನಡೆಸಿದ್ದೀಯೆ. ಈಗ ನನ್ನ ಕೊನೆಯ ಕ್ಷಣ ಬಂದಿದೆ. ನಿನಗೆ ಕೊನೆಯದಾಗಿ ಒಂದು ವಿಷಯ ಹೇಳುತ್ತೇನೆ. ಅದನ್ನು ಚೆನ್ನಾಗಿ ಗ್ರಹಿಸು" ಎಂದನು.

ಲುಕುಮಾನನ ಮಗ ಸುಮ್ಮನೆ ತಲೆಯಾಡಿಸಿದ. ಅವನಿಗೆ ದುಃಖ ಒತ್ತರಿಸಿ ಬರುತ್ತಿತ್ತು. "ಮಗೂ, ದೇವರ ಕೋಣೆಯಲ್ಲಿರುವ ಧೂಪದ ಪಾತ್ರೆಯನ್ನು ತೆಗೆದುಕೊಂಡು ಬಾ" ಎಂದು ಲುಕುಮಾನ ಕ್ಷೀಣ ಧ್ವನಿಯಲ್ಲಿ ಹೇಳಿದ. ಅವನ ಮಗ ಬೇಗ ಹೋಗಿ ಧೂಪದ ಪಾತ್ರೆಯನ್ನು ತಂದು ತಂದೆಯ ಮುಂದೆ ಹಿಡಿದ. ಲುಕುಮಾನ ಭರಣಿ ತೆಗೆದು ಸ್ವಲ್ಪ ಶ್ರೀಗಂಧದ ಪುಡಿಯನ್ನು ಮಗನ ಅಂಗೈಯಲ್ಲಿಟ್ಟ. ಅನಂತರ ಅಲ್ಲೇ ಇದ್ದ ಅಗ್ಗಿಷ್ಟಿಕೆಯಿಂದ ಒಂದು ಚೂರು ಇದ್ದಿಲು ತೆಗೆದು ಮಗನ ಇನ್ನೊಂದು ಕೈಯಲ್ಲಿಟ್ಟ. ಮಗ ಕುತೂಹಲದಿಂದ ತಂದೆಯ ಈ ಕೆಲಸವನ್ನು ನೋಡುತ್ತಿದ್ದ. ಅವನಿಗೆ ಏನೊಂದೂ ಅರ್ಥವಾಗಲಿಲ್ಲ.

"ಮಗೂ! ಈಗ ಇದನ್ನು ಮತ್ತೆ ಅದರ ಸ್ಥಾನದಲ್ಲಿ ಇಟ್ಟುಬಿಡು."

ಲುಕಮಾನ ಮಗನ ಕೈ ನೋಡುತ್ತ ಹೇಳಿದ, "ಮಗೂ! ಸಜ್ಜನರ ಸಹವಾಸ ಹೆಚ್ಚೇನು ಸವಿದಂತೆ. ಸತ್ಸಂಗ ಚಂದನದಂತೆ. ಸಜ್ಜನರು, ಸಾಧು–ಸಂತರು, ಮಹಾತ್ಮರು ನಮ್ಮ ಜೊತೆಯಲ್ಲಿ ಇರುವವರೆಗೂ ಅವರಿಂದ ನಮಗೆ ಒಳಿತಾಗುತ್ತದೆ. ಅವರು ನಮ್ಮಿಂದ ದೂರಹೋದರೂ ಅವರ ಸಹವಾಸದ ಸುಖ ಸದಾ ನಮ್ಮೊಂದಿಗಿರುತ್ತದೆ. ಆ ಸುಖದ ಕ್ಷಣಗಳು ಸದಾ ಸಿಹಿಯಾಗಿರುತ್ತವೆ, ಆನಂದದಾಯಕವಾಗಿರುತ್ತವೆ. ದುರ್ಜನರು ನಮ್ಮ ಜೊತೆ ಇದ್ದಾಗಲೂ, ದೂರ ಹೋದಾಗಲೂ ಅವರ ಸಹವಾಸದ ದುಃಖ ನಮ್ಮನ್ನು ಕಾಡುತ್ತದೆ; ಜೀವನದಲ್ಲಿ ಅಶಾಂತಿ ತುಂಬಿ ನೆಮ್ಮದಿ ಹಾಳಾಗುತ್ತದೆ. ನಾವು ಶ್ರೀಗಂಧದ ಸಹವಾಸ ಮಾಡಬೇಕೇ ಹೊರತು, ಇದ್ದಿಲಿನ ಸಹವಾಸ ಮಾಡಬಾರದು. ಸಜ್ಜನರಿಂದ ನಮ್ಮ ಗೌರವ ಇಮ್ಮಡಿಸುತ್ತದೆ. ದುರ್ಜನರಿಂದ ನಮ್ಮ ಗೌರವ ಕ್ಷೀಣಿಸುತ್ತದೆ. ಆದ್ದರಿಂದ ನೀನು ಸದಾ ಸಜ್ಜನರ ಸಹವಾಸ ಮಾಡು, ದುಷ್ಟರಿಂದ ದೂರವಿರು."

ಹೀಗೆ ಲುಕಮಾನ ನೀತಿಸಂಹಿತೆಯನ್ನು ಮಗನಿಗೆ ಪರಿಚಯಿಸಿದ. ತಂದೆ ಶ್ರೀಗಂಧದ ಪುಡಿ ಹಾಗೂ ಇದ್ದಿಲಿನ ದೃಷ್ಟಾಂತದಿಂದ ಜೀವನದ ಮಾರ್ಗವನ್ನು ಸಂಕೇತಿಸಿದ್ದು ಲುಕಮಾನನ ಮಗನಿಗೆ ಸಂತೋಷವನ್ನು ಉಂಟುಮಾಡಿತು. ಅವನು ತನ್ನ ಜೀವನದುದ್ದಕ್ಕೂ ತನ್ನ ತಂದೆಯ ಮಾತುಗಳನ್ನು ನೆನಪಿಟ್ಟುಕೊಂಡು, ಅದರಂತೆಯೇ ನಡೆದುಕೊಂಡ. ತಂದೆಯ ಬಗ್ಗೆ ಅವನ ಹೃದಯದಲ್ಲಿ ಅಪಾರ ಕೃತಜ್ಞತೆಯಿತ್ತು.

(ಆಧಾರ : ಸಾರ್ಥಕ ಬದುಕಿಗೆ ೧೦೦ ಸ್ಫೂರ್ತಿ ಕತೆಗಳು:
ಲೇಖಕರು: ಎಂ.ವಿ. ನಾಗರಾಜ ರಾವ್)